ಇಸವಿ 1960. ಎಂಜಿನಿಯರ್ ಆಗುವ ದೃಢ ನಿರ್ಧಾರದಲ್ಲಿ ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ಗೆ (ಐ.ಐ.ಎಸ್ಸಿ) ಸೇರಲು ಹೊರಟು ನಿಂತ ಶಾಂತಾ ಅವರಿಗೆ ತಂದೆ ಮತ್ತೊಮ್ಮೆ ಒತ್ತಿ ಹೇಳಿದರು 'ಬೇಡಮ್ಮ, ಇದೆಲ್ಲ ಏಕೆ? ವಿದ್ಯುತ್ ಕಂಬ ಹತ್ತಬೇಕಾಗುತ್ತೆ, ನಿನ್ನ ಕೈಯಲ್ಲಿ ಆಗುತ್ತಾ ಹೇಳು?' – ತಂದೆಗೆ ಅದೊಂದೇ ಆತಂಕವಲ್ಲ, ಬರೀ ಹುಡುಗರೇ ಇರುವ ಜಾಗದಲ್ಲಿ ಮಗಳು ಓದಲು ಹೊರಟಿರುವುದೂ ಚಿಂತೆಯ ವಿಷಯವಾಗಿತ್ತು. ಯಾವ ಕಂಬ ಹತ್ತಬೇಕೋ, ಶಾಂತಾ ಅವರಿಗೂ ತಿಳಿದಿರಲಿಲ್ಲ. ಆದರೆ ಅವರು ತಮ್ಮ ಸಂಕಲ್ಪವನ್ನು ಬದಲಿಸಲಿಲ್ಲ. 1960ರ ದಶಕದಲ್ಲಿ ಹೆಣ್ಣುಮಗಳೊಬ್ಬಳು ಎಂಜಿನಿಯರ್ ಆಗುವುದು, ಕಾರ್ಖಾನೆಯೊಂದರಲ್ಲಿ ದುಡಿಯಲು ಹೋಗುವುದು ಕಡಿಮೆ ಸಾಹಸವಾಗಿರಲಿಲ್ಲ.

ಭಾರತದ ಆರಂಭಿಕ ಎಲೆಕ್ಟ್ರಾನಿಕ್ ಕಂಪನಿಗಳಲ್ಲಿ ಒಂದಾದ 'ಮೈಕ್ರಾನಿಕ್ಸ್ ಡಿವೈಸಸ್' ಸ್ಥಾಪಿಸಿದವರಲ್ಲಿ ಒಬ್ಬರು, ಶಾಂತಾ ವಿಜಯರಾಘವನ್. ಎಲೆಕ್ಟ್ರಾನಿಕ್ ರಂಗದಲ್ಲಿ 1960ರ ದಶಕದಲ್ಲಿಯೇ ದುಡಿಯತೊಡಗಿದ ಇವರ ಭೇಟಿ, ತಾಂತ್ರಿಕ ರಂಗಕ್ಕೆ ಪ್ರವೇಶಿಸಿದ ಆ ದಶಕಗಳ ಮಹಿಳೆಯರ ಅನುಭವಲೋಕಕ್ಕೆ ಬಾಗಿಲು ತೆರೆದಿತ್ತು. ಜೊತೆಗೇ, ಪತಿ–ಪತ್ನಿಯರಿಬ್ಬರೂ ಎಂಜಿನಿಯರುಗಳಾಗಿ ಒಟ್ಟಿಗೆ ದುಡಿದ ಅನುಪಮ ಜೋಡಿಯ ಅಪರೂಪದ ಕತೆ ಹೇಳಿತ್ತು. ನನಗೆ ತಿಳಿದ ಮಟ್ಟಿಗೆ, ಶಾಂತಾ–ವಿಜಯರಾಘವನ್ ಎಲೆಕ್ಟ್ರಾನಿಕ್ ಕಂಪನಿಯೊಂದನ್ನು ಸ್ಥಾಪಿಸಿ ಜೊತೆಯಾಗಿ ದುಡಿದ ಕರ್ನಾಟಕದ ಪ್ರಥಮ ಎಂಜಿನಿಯರ್ ದಂಪತಿ.

## ಮಹಿಳಾ ಎಂಜಿನಿಯರುಗಳಿಗಿದ್ದ ಸವಾಲುಗಳು

ಶಾಂತಾ ತಮ್ಮ ಬದುಕಿನ ಪ್ರಮುಖ ಘಟನೆಗಳನ್ನು 'ಕೋವಿಡ್' ಸಮಯದಲ್ಲಿ ಬರೆದಿಡಲು ಹೊರಟಾಗ, ಅವರ ಪುತ್ರ, 'ಬರೆಯುವಾಗ ನಿನ್ನ ಕಾರ್ಯ ಕ್ಷೇತ್ರವನ್ನೂ, ವೈಯಕ್ತಿಕ ಬದುಕನ್ನೂ ಬೇರೆಬೇರೆಯಾಗಿ ವಿಂಗಡಿಸು' ಎಂದು ಹೇಳಿದ್ದರು. ಶಾಂತಾ 'ನನ್ನ ವೃತ್ತಿನಿರತ ಬದುಕು, ನನ್ನ ವೈಯಕ್ತಿಕ ಬದುಕಿನ ಭಾಗವಾಗಿದ್ದು, ಅದನ್ನು ವಿಂಗಡಿಸಲಾಗದು' ಎಂದು ನನಗೆ ಹೇಳಿದಾಗ, ಇದು ಬಹುಶಃ ಎಲ್ಲ ಉದ್ಯೋಗಸ್ಥ ಮಹಿಳೆಯರ ಅನುಭವ ಅನಿಸಿತು. ಮಹಿಳೆಯರ ಉದ್ಯೋಗದ ಮೇಲೆ ವೈಯಕ್ತಿಕ ಬದುಕು ತೀವ್ರವಾಗಿ ಪ್ರಭಾವ ಬೀರಿದೆ, ಬೇರ್ಪಡಿಸಲಾರದಂತೆ ಒಂದಕ್ಕೊಂದು ಅಂಟಿಕೊಂಡಿರುವುದಿದೆ. ಪುರುಷನೊಬ್ಬನು ವಿವಾಹವಾದಾಗ, ತಂದೆಯಾದಾಗ, 'ಕೆಲಸ ಬಿಡಬೇಕು' ಎಂಬ ಒತ್ತಡವನ್ನು ಅನುಭವಿಸುವುದಿಲ್ಲ; ಪತ್ನಿಗೆ ಪರ ಊರಿಗೆ ವರ್ಗವಾದರೆ ತನ್ನ ಕೆಲಸ ಬಿಟ್ಟು ಆಕೆಯನ್ನು ಹಿಂಬಾಲಿಸುವುದಿಲ್ಲ. ಶಾಂತಾ ಅವರ 1960ರ ದಶಕದ ಕಾಲದಲ್ಲಿ ಮಾತ್ರವಲ್ಲ, ಇಂದೂ ಕೂಡ ಉದ್ಯೋಗಸ್ಥ ಮಹಿಳೆಯರು ವಿವಾಹ, ತಾಯ್ತನ, ಪತಿಯ ವರ್ಗ, ಕುಟುಂಬದಲ್ಲಿ ಅನಾರೋಗ್ಯ – ಇಂತಹ ಘಟ್ಟಗಳಲ್ಲಿ ಸಂದಿಗ್ಧದ ಪರಿಸ್ಥಿತಿಯಲ್ಲಿ ಸಿಕ್ಕಿಬೀಳುತ್ತಾರೆ. ಅನೇಕರು ಕೆಲಸ ಬಿಡುವ ನಿರ್ಧಾರಕ್ಕೆ ತಲುಪುತ್ತಾರೆ; ಅದು ಅವರ ಆಯ್ಕೆಯಾಗಿಲ್ಲದಿದ್ದರೂ, ಅನಿವಾರ್ಯವಾಗುವಂತಹ ಸಂದರ್ಭಗಳು ಏರ್ಪಡುತ್ತವೆ. ಉದ್ಯೋಗ ಹಾಗೂ ಕಾರ್ಯಕ್ಷೇತ್ರದ ಮುನ್ನಡೆ ಆಕೆಯ ಸಾಮರ್ಥ್ಯದ ಮೇಲೆ ಮಾತ್ರ ನಿಂತಿಲ್ಲ, ಬದುಕಿನ ಕಠಿಣ ನಿರ್ಧಾರಗಳ ಮೇಲೆ ಒಂಟಿಗಾಲಿನಲ್ಲಿ ನಿಂತಿರುವುದುಂಟು.

ಶಾಂತಾ 6 ಸೆಪ್ಟೆಂಬರ್ 1942ರಂದು ಬೆಂಗಳೂರಿನಲ್ಲಿ ವಾಣಿವಿಲಾಸ ಆಸ್ಪತ್ರೆಯಲ್ಲಿ ಹುಟ್ಟಿದವರು. ತಾಯಿ ಸರೋಜಮ್ಮ ಮತ್ತು ತಂದೆ ಕೆ.ಎಸ್. ರಾಜಾ ಐಯಂಗಾರ್. ಶಾಂತಾ ಆ ಮನೆಗೆ ಮೂರನೇ ಹೆಣ್ಣು ಮಗುವಾಗಿ ಹುಟ್ಟಿದ್ದರು. ಅಕ್ಕಂದಿರು, ಹೇಮಾ ಮತ್ತು ಶ್ರೀಮತಿ. ಅವರ ತಂದೆ ಮೈಸೂರು ಸಂಸ್ಥಾನದಲ್ಲಿ ಡಿಸ್ಟ್ರಿಕ್ಟ್ ಎಜುಕೇಷನ್ ಆಫೀಸರ್ ಆಗಿದ್ದ ಕಾರಣ, ಅವರಿಗೆ ಪದೇ ಪದೇ ವರ್ಗವಾಗುತ್ತಿತ್ತು. ಮೈಸೂರಿನಲ್ಲಿ ಶಾಲೆ ಸೇರಿದ ಶಾಂತಾ, ಐದನೇ ತರಗತಿಯವರೆಗೆ 'ಮಿಷನ್ ಸ್ಕೂಲ್'ನಲ್ಲಿ ಓದಿದರು.

ಅಕ್ಕ ಹೇಮಾ ಒಳ್ಳೆಯ ಅಂಕಗಳನ್ನು ಪಡೆದು ಇಂಟರ್‌ಮೀಡಿಯೆಟ್ ಮುಗಿಸಿದ್ದಳು; ಅಷ್ಟು ಅಂಕ ಪಡೆದ ಆಕೆಯ ಸಹಪಾಠಿಗಳು ಎಂ.ಬಿ.ಬಿ.ಎಸ್.ಗೆ ಅರ್ಜಿ ಹಾಕಿದ್ದರು. ಆದರೆ ಮಗಳು ವೈದ್ಯಳಾಗುವ ಅಷ್ಟೆಲ್ಲ ವರ್ಷಗಳು ಕಾಯಲು ತಂದೆ ಸಿದ್ಧವಿರಲಿಲ್ಲ. 1951ರಲ್ಲಿ ಕೇವಲ ಹದಿನಾರು ವರ್ಷದ ಅಕ್ಕ ಹೇಮಾಳ ಮದುವೆ ಆಗಿಯೇ ಹೋಯಿತು. ವಿವಾಹವಾದ ಎರಡು ವರ್ಷಕ್ಕೆ ಹೇಮಾಗೆ ಮಗು ಹುಟ್ಟಿತ್ತು. ಇತ್ತ ಶಾಂತಾ ಪ್ರಥಮ ದರ್ಜೆಯಲ್ಲಿ ಬಿ.ಎಸ್ಸಿ. ಪಾಸಾದರು. ಭೌತಶಾಸ್ತ್ರ ಮತ್ತು ಗಣಿತ ಎರಡರಲ್ಲಿಯೂ ಡಿಸ್ಟಿಂಕ್ಷನ್ ಪಡೆದಿದ್ದರು.

## ಎಂಜಿನಿಯರ್ ಆಗಲು ಕಂಬ ಹತ್ತಬೇಕೆ?

ಬಿ.ಎಸ್ಸಿ. ಮುಗಿಸಿದಾಗ ಶಾಂತಾಗಿನ್ನೂ 18 ವರ್ಷ ವಯಸ್ಸು. ತಂದೆ ಅವರಿಗೆ ಮದುವೆ ಮಾಡಬೇಕೆಂದು ಗಂಡು ಹುಡುಕಲು ತೊಡಗಿದರು. ಶಾಂತಾ ಅವರಿಗೆ ಈಗಲೇ ಮದುವೆ ಬೇಕಿರಲಿಲ್ಲ. ತೀವ್ರವಾಗಿ ಪ್ರತಿಭಟಿಸಿದರು. ಜಾತಕ ಇಲ್ಲದೆ ಮದುವೆ ಆಗುತ್ತಿದ್ದ ಕಾಲವಲ್ಲ. ಶಾಂತಾ ತಮ್ಮ ಜಾತಕವನ್ನೇ ಮರೆಮಾಡಿದರು. ಅವರ ಅಕ್ಕ ಶ್ರೀಮತಿ ಮದುವೆಯೇ ಬೇಡವೆಂದು ಹಟ ಹಿಡಿದಿದ್ದರು. ಇಂಥಾ ಸಮಯದಲ್ಲಿ ಬೆಂಗಳೂರಿನಲ್ಲಿದ್ದ ಹೇಮಾ, ಶಾಂತಾ ಅವರಿಗೆ 'ಬಿ.ಎಸ್ಸಿ. ಮಾಡಿದವರು ಟಾಟಾ ಇನ್‌ಸ್ಟಿಟ್ಯೂಟಿನಲ್ಲಿ ಎಂಜಿನಿಯರಿಂಗ್ ಓದಬಹುದು' ಎಂದು ತಿಳಿಸಿದರು. ಅದರ ಎಲ್ಲ ವಿವರಗಳನ್ನು ಶಾಂತಾ ಅವರಿಗೆ ಕಳುಹಿಸಿ ಕೊಟ್ಟರು.

ಭೌತಶಾಸ್ತ್ರ ಮತ್ತು ಗಣಿತದಲ್ಲಿ ಒಳ್ಳೆಯ ಅಂಕಗಳಿದ್ದ ಶಾಂತಾ ಅವರಿಗೆ ಜುಲೈ ತಿಂಗಳಲ್ಲಿ ಅರ್ಜಿ ಹಾಕಿದೊಡನೆ, ಬೆಂಗಳೂರಿನ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನ 'ಎಲೆಕ್ಟ್ರಿಕಲ್ ಕಮ್ಯುನಿಕೇಶನ್ ಎಂಜಿನಿಯರಿಂಗ್' ವಿಭಾಗದಲ್ಲಿ ಸೀಟು ಸಿಕ್ಕಿತು. ತಂದೆಗೆ ಮಗಳು ಎಂಜಿನಿಯರಿಂಗ್ ಸೇರುವುದು ಸುತರಾಂ ಬೇಡವಾಗಿತ್ತು. 'ಬಿಎಸ್ಸಿ



